4.	Tourist facility at Pilikula	28.10
5.	Amount released to public conveniences (to complete this project in anticipation of Central Share)	25.84
6.	Tourist Cottages at Pilikula Nisarga Dhama (in anticipation of Central Share)	20.00
		Rs. 98.153 lakhs

ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯ ಪಾಲಿ ಕ್ಲಿನಿಕ್ ಯೋಜನೆ.

2231 (2728) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿ ಪಶುಪಾಲನಾ ಇಲಾಖೆ ಪಾಲಿಕ್ಲಿನಿಕ್ ಯೋಜನೆಯನ್ನು ಜಾರಿಗೆ ತಂದಿದೆಯೇ?

2) ಹಾಗಿದ್ದಲ್ಲಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಪಾಲಿಕ್ಲಿನಿಕ್ ಯೋಜನೆಯನ್ನು ಜಾರಿಗೊಳಿಸಲಾಗಿದೆ?

3) ಈ ಪಾಲಿಕ್ಲಿನಿಕ್ ಯೋಜನೆಯ ಮುಖ್ಯ ಉದ್ದೇಶಗಳೇನು?

4) ಈ ಪಾಲಿಕ್ಲಿನಿಕ್ ಯೋಜನೆ ನಿಗಧಿತ ಗುರಿ ಸಾಧಿಸುವಲ್ಲಿ ಎಡವಿರುವುದು ನಿಜವೇ?

5) ಸ್ವಂತ ಕಟ್ಟಡ ಹಾಗೂ ಸಿಬ್ಬಂದಿ ಇಲ್ಲದ ಈ ಯೋಜನೆಯ ಅನುಷ್ಠಾನ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

6) ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

1) ಜಾರಿಗೆ ತಂದಿದೆ.

2) ರಾಜ್ಯದಲ್ಲಿ ಒಟ್ಟಾರೆ ೨೩ ಪಾಲಿಕ್ಲಿನಿಕ್‌ಗಳನ್ನು ಈ ಕೆಳಕಂಡ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ.

1)	ಉಡುಪಿ	-	1
2)	ತುಮಕೂರು	-	1
3)	ಬೀದರ್	-	1
4)	ಮಂಡ್ಯ	-	2
5)	ಮೈಸೂರು	-	3
6)	ಶಿವಮೊಗ್ಗ	-	1
7)	ಉತ್ತರ ಕನ್ನಡ	-	1
8)	ಬೆಂಗಳೂರು (ಗ್ರಾಮಾಂತರ)	-	2
9)	ಬೆಳಗಾವಿ	-	1
10)	ಚಿತ್ರದುರ್ಗ	-	1
11)	ಗುಲ್ಬರ್ಗಾ	-	1
12)	ರಾಯಚೂರು	-	1
13)	ಹಾಸನ	-	1
14)	ಗದಗ	-	1
15)	ಬಿಜಾಪುರ	-	1
16)	ಚಿಕ್ಕಮಗಳೂರು	-	1
17)	ಕೋಲಾರ	-	1
18)	ಬಳ್ಳಾರಿ	-	1
19)	ಕೊಡಗು	-	1
	ಒಟ್ಟು	-	23

3) ಆಸ್ಪತ್ರೆಗಳ ದಿನನಿತ್ಯ ಕರ್ತವ್ಯಗಳ ಜೊತೆಗೆ ವಿಷದೋಪಚಾರ, ಶಸ್ತ್ರಚಿಕಿತ್ಸೆ, ಪ್ರಸೂತಿ ಮುಂತಾದ ವಿಭಾಗಗಳಲ್ಲಿ ವಿಶೇಷ ಪರಿಣತರು ಪಶುವೈದ್ಯಕೀಯ ಸೇವೆಗಳನ್ನು ನೀಡುವುದು, ರೋಗ ತಪಾಸಣೆ, ಜಾನುವಾರು ಮತ್ತು ಸಾಕುಪ್ರಾಣಿಗಳಾದ ಶ್ವಾನ ಇತ್ಯಾದಿಗಳಿಗೆ ಒಳರೋಗ ವ್ಯವಸ್ಥೆ ಹಾಗೂ ಹೊರರೋಗಿಗಳ ಚಿಕಿತ್ಸಾ ವ್ಯವಸ್ಥೆಗಳು, ಕ್ಷ-ಕಿರಣ ವ್ಯವಸ್ಥೆಗಳ ಸೌಲಭ್ಯಗಳನ್ನು ಒದಗಿಸುವುದು ಮುಂತಾದವುಗಳು ಈ ಪಾಲಿಕ್ಲಿನಿಕ್‌ಗಳ ಮುಖ್ಯ ಉದ್ದೇಶವಾಗಿರುತ್ತದೆ.

4) ಇಲ್ಲ.

5) ಇಲ್ಲ.

6) ಈಗಿರುವ ವ್ಯವಸ್ಥೆಯಲ್ಲಿಯೇ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ತೆನಿಕೊಳ್ಳ ಪ್ರವಾಸಿ ಕೇಂದ್ರದಲ್ಲಿರುವ ರಂಗಮಂಟಪವನ್ನು ಪೂರ್ಣಗೊಳಿಸುವುದು.

2233 (2703) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :— ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ರಂಗಮಂಟಪಗಳನ್ನು ಕಟ್ಟಲು ಎಷ್ಟು ಹಣವನ್ನು ಒದಗಿಸಲಾಗಿದೆ.

ಆ) ರಾಜ್ಯದಲ್ಲಿ ಎಷ್ಟು ರಂಗಮಂಟಪಗಳು ಅರ್ಧಕ್ಕೆ ಕಟ್ಟಿ ನಿಲ್ಲಿಸಲಾಗಿದೆ.

ಇ) ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ತೆನಿಕೊಳ್ಳ ಪ್ರವಾಸಿ ಕೇಂದ್ರದಲ್ಲಿ ರಂಗಮಂಟಪ ಕಟ್ಟಡವು ಅರ್ಧಕ್ಕೆ ನಿಂತ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ತೆನಿಕೊಳ್ಳ ಪ್ರವಾಸಿ ಕೇಂದ್ರದಲ್ಲಿ ಕಟ್ಟಲಾಗಿತ್ತಿರುವ ರಂಗಮಂಟಪಕ್ಕೆ 2.50 ಲಕ್ಷ ರೂ.ಗಳಿಗೆ ಮಂಜೂರಾತಿಯನ್ನು ನೀಡಲಾಗಿದ್ದು ಅದಕ್ಕೆ ಈಗ ಕೇವಲ 50,000-00 ರೂ.ಗಳನ್ನು ಬಿಡುಗಡೆಗೊಳಿಸಿರುವ ಸಂಗತಿ ನಿಜವೇ?

ಉ) ಹಿಂದಿನ ಲೋಕ ಸಭಾ ಸದಸ್ಯರು ಈ ಕಟ್ಟಡಕ್ಕೆ ತಮ್ಮ ಸಂಸದರ ನಿಧಿಯಲ್ಲಿ 2.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡುವುದಕ್ಕಾಗಿ ಸರ್ಕಾರಕ್ಕೆ ಪತ್ರ ಬರೆದಿದ್ದು, ಆದರೆ ಅವರು ತಮ್ಮ ಸಂಸದರ ಅಧಧಿಯಲ್ಲಿ ಸದರಿ ಹಣವನ್ನು ಬಿಡುಗಡೆ ಮಾಡದೇ ಇರುವುದರಿಂದ ಈ ಕಟ್ಟಡ ಅರ್ಧಕ್ಕೆ ನಿಂತ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದಲ್ಲಿ ಈಗಿನ ಹೊಸ ಸಂಸದರು ಈ ಕಟ್ಟಡಕ್ಕೆ ತಮ್ಮ ನಿಧಿಯಿಂದ ರೂ.2.00 ಲಕ್ಷಗಲನ್ನು ಬಿಡುಗಡೆ ಮಾಡಲು ಸಿದ್ದರಿಲ್ಲದೇ ಇರುವುದರಿಂದ ಸರ್ಕಾರ ಈ ಕಟ್ಟಡಕ್ಕೆ ವಿಶೇಷ ಅನುದಾನವಾಗಿ 2.00 ಲಕ್ಷರೂ.ಗಳನ್ನು ಬಿಡುಗಡೆ ಮಾಡಿ ಅರ್ಧಕ್ಕೆ ನಿಂತ ಕೆಲಸವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವರು) :—

ಅ) ಈ ಸಾಲಿನಲ್ಲಿ ಒಟ್ಟು 10.00 ಲಕ್ಷಗಳು ಮಾತ್ರ